# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-37ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ದಿನಾಂಕ: 25.11.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.37 ಯಶವಂತಪುರ ವಾರ್ಡ್‌ನ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.37ರ ವಾರ್ಡ್ ಕಛೇರಿ, ಮಾಡೆಲ್ ಕಾಲೋನಿ, 2ನೇ ಅಡ್ಡರಸ್ತೆಯ ಕಟ್ಟಡದಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು

### ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರು:-

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಹುದ್ದೆ | ಪದನಾಮ | ಹಾಜರಾತಿ |
|---|---|---|---|---|
| 1 | ಶ್ರೀ ಎನ್. ಜಿ. ಉಮೇಶ್ | ಸಕ್ವಾ.ನಿ.ಅ. | ಅಧ್ಯಕ್ಷರು/ ವಾರ್ಡ್ ನೋಡಲ್ ಅಧಿಕಾರಿ | ಹಾಜರಿದ್ದರು |
| 2 | ಎನ್. ಜಿ. ಉಮೇಶ್ | ಸಹಾಯಕ ಅಭಿಯಂತರರು | ಸದಸ್ಯರು | ಹಾಜರಿದ್ದರು |
| 3 | ಡಾ|| ಹರ್ಷಿತ್ | ಕೋವಿಡ್ ವೈದ್ಯಾಧಿಕಾರಿಗಳು | ಸದಸ್ಯರು | ಹಾಜರಿದ್ದರು |
| 4 | ಡಾ|| ಮಹೇಶ್ | ಕೋವಿಡ್ ವೈದ್ಯಾಧಿಕಾರಿಗಳು | ಸದಸ್ಯರು | ಹಾಜರಿದ್ದರು |
| 5 | ಎನ್. ಪ್ರಕಾಶ್ | ಮೌಲ್ಯಮಾಪಕರು, ಸ.ಕಂ.ಅ. (ಯಶವಂತಪುರ) | ಸದಸ್ಯರು | ಹಾಜರಿದ್ದರು |
| 6 | ಗೋವಿಂದರಾಜು ಕೆ. | ಕಂದಾಯ ವಸೂಲಿಗಾರರು ಸ.ಕಂ.ಅ. (ಯಶವಂತಪುರ) | ಸದಸ್ಯರು | ಹಾಜರಿದ್ದರು |
| 7 | ಅನಿಲ್ ಕುಮಾರ್ ಎಂ. | ಸಹಾಯಕ ಅಭಿಯಂತರರು, ಬೆಸ್ಕಾಂ | ಸದಸ್ಯರು | ಹಾಜರಿದ್ದರು |
| 8 | ಹೆಚ್.ಟಿ.ಎ. ಕುಮಾರ್ | ಕಿರಿಯ ಅಭಿಯಂತರರು, ಬೆಸ್ಕಾಂ | ಸದಸ್ಯರು | ಹಾಜರಿದ್ದರು |
| 9 | ಚನ್ನೇಶಪ್ಪ | ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ | ಸದಸ್ಯರು | ಹಾಜರಿದ್ದರು |
| | ಸುಜಾತಾ | ಲಿಂಕ್ ವರ್ಕರ್ | ಸದಸ್ಯರು | ಹಾಜರಿದ್ದರು |
| 10 | ಸತ್ಯವತಿ | ಲಿಂಕ್ ವರ್ಕರ್ | ಸದಸ್ಯರು | ಹಾಜರಿದ್ದರು |
| 11 | ಶಿವಪ್ರಕಾಶ್ ಎಂ. | ಬಿ.ಎಲ್.ಜಿ. ಹೋಂ ಐಸೋಲೇಷನ್ ಟೀಂ | ಸದಸ್ಯರು | ಹಾಜರಿದ್ದರು |
| 13 | ಸಿದ್ದರಾಮಯ್ಯ | ಮೇಲ್ವಿಚಾರಕರು ಐಸೋಲೇಷನ್ ಟೀಂ | ಸದಸ್ಯರು | ಹಾಜರಿದ್ದರು |
| 14 | ಮುರಳಿ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 15 | ಬಿ. ಜಾನ್ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 16 | ರೆಡ್ಡಿ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |

ವಾರ್ಡ್-37ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಸದಸ್ಯರುಗಳನ್ನು ಪರಸ್ಪರ ಪರಿಚಯ ಮಾಡಿಸಿ, ಮಾರ್ಗಸೂಚಿಯಂತೆ, ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದಿಟ್ಟು ವಾರ್ಡ್ ಸಮಿತಿ ಸಭೆಯು ನಿರ್ವಹಿಸಬೇಕಾದ ಅಂಶಗಳನ್ನು ತಿಳಿಸಿ, ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

1) ಆರೋಗ್ಯ :-

ಸಭೆಗೆ ಹಾಜರಿದ್ದ ವೈದ್ಯಾಧಿಕಾರಿಗಳಾದ ಹರ್ಷಿತ್ ರವರು ಮಾತನಾಡಿ, ಪ್ರತಿ ಬುಧವಾರದಂದು ವಾರ್ಡ್‌ನಲ್ಲಿ ವ್ಯಾಕ್ಸೀನ್ ಮೇಳವನ್ನು ನಡೆಸುತ್ತಿರುವುದಾಗಿ ಹೇಳಿದರು. ಒಟ್ಟು ವಾರ್ಡ್‌ನಲ್ಲಿ 91% ಮೊದಲನೇ ಡೋಸ್ ಹಾಗೂ 56% ಎರಡನೇ ಡೋಸ್ ಲಸಿಕೆ ಶೇಕಡಾವಾರು ಲಸಿಕೆ ಮುಗಿದಿರುವುದಾಗಿ ಸಭೆಗೆ ತಿಳಿಸಿದರು. ವ್ಯಾಕ್ಸೀನ್ ಬಗ್ಗೆ ಜಾಗೃತಿ ಮೂಡಿಸಲು ವಾರ್ಡ್‌ನ ವ್ಯಾಪ್ತಿಯಲ್ಲಿ ಧ್ವನಿವರ್ಧಕ ಹಾಗೂ ಆಟೋ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗುತ್ತಿದೆ ಎಂದು ವೈದ್ಯಾಧಿಕಾರಿಗಳು ಸಭೆಯಲ್ಲಿ ಹೇಳಿದರು.

ವಾರ್ಡ್‌ನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಟಮಿನ್ ಸಿ, ವಿಟಮಿನ್ ಡಿ 3 ಹಾಗೂ ಝಿಂಕ್ ಔಷಧಿಯ ಕೊರತೆಯಿದ್ದು, ಔಷಧಿಯನ್ನು ಪೂರೈಸಲು ಆರೋಗ್ಯ ಇಲಾಖೆ ಗಮನ ಕೊಡದೇ ಇರುವುದು ಕಂಡುಬಂದಿದ್ದು, ಕ್ರಮವಹಿಸಲು ಸೂಚಿಸಲಾಯಿತು.

ವಾರ್ಡ್‌ನ ವ್ಯಾಪ್ತಿಯಲ್ಲಿ ಡೆಂಗ್ಯೂ ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ ಜಾಗೃತಿಯಿಂದರಲು ವಾರ್ಡ್ ವ್ಯಾಪ್ತಿಯಲ್ಲಿ ಬ್ಲ್ಯಾಕ್‌ಸ್ಪಾಟ್ ಹಾಗೂ ನೀರು ನಿಲ್ಲುವ ಜಾಗಗಳನ್ನು ಗುರುತಿಸಿ ಸದರಿ ಜಾಗಗಳಿಗೆ ಫಾಗಿಂಗ್ ವ್ಯವಸ್ಥೆಯನ್ನು ಮಾಡಲು ಸೂಕ್ತ ಫಾಗಿಂಗ್ ಗುತ್ತಿಗೆದಾರರಿಗೆ ಕರೆ ಮಾಡಿ ಗುರುತಿಸಲ್ಪಟ್ಟ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ವ್ಯವಸ್ಥಿತ ರೀತಿಯಲ್ಲಿ ಮೆಡಿಸನ್ ಹಾಕಿ ಫಾಗಿಂಗ್ ಮಾಡಲು ಗುತ್ತಿಗೆದಾರರಿಗೆ ತಿಳಿಸಿದರು. ಗುತ್ತಿಗೆದಾರರು ಮಾತನಾಡಿ ಫಾಗಿಂಗ್ ಮೆಡಿಸನ್‌ಗಳ ಸರಬರಾಜು ರದ್ದುಗೊಳಿಸಿರುವುದಾಗಿ ಹೇಳಿದರು. ಅದರಂತೆ ಸಂಬಂಧಪಟ್ಟ ಆರೋಗ್ಯ ಅಧಿಕಾರಿಗಳಾದ ಸಿದ್ದಪ್ಪಾಜಿರವರಿಗೆ ಕರೆ ಮಾಡಿ ಫಾಗಿಂಗ್ ಮೆಡಿಸನ್‌ಗಳನ್ನು ಅತಿ ಶೀಘ್ರದಲ್ಲಿ ಪೂರೈಸಲು ಮನವಿ ಮಾಡಿಕೊಂಡರು.

2) ಪೌರ ಕಾರ್ಮಿಕರ ಬಗ್ಗೆ:

ಪೌರ ಕಾರ್ಮಿಕರ ಮೇಲ್ವಿಚಾರಕರಾದ ಮುರಳಿ ಮಾತನಾಡಿ, ಪೌರ ಕಾರ್ಮಿಕರಿಗೆ ಮಾಸ್ಕ್‌ಗಳು, ಗ್ಲೌಸ್‌ಗಳು ಹಾಗೂ ಪೊರಕೆಗಳ ಕೊರತೆಯಿರುವುದಾಗಿ ಸಭೆಗೆ ತಿಳಿಸಿದರು. ಕೊರತೆಯನ್ನು ಆಲಿಸಿದ ನೋಡಲ್ ಅಧಿಕಾರಿಗಳು ಪೌರ ಕಾರ್ಮಿಕರ ಆರೋಗ್ಯವು ಅತೀ ಮುಖ್ಯ. ಆದುದರಿಂದ ಕೂಡಲೇ ಶ್ರೀ ಪ್ರಕಾಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರಾ ರಾ ನಗರ ವಿಭಾಗ ರವರಿಗೆ ಕರೆ ಮಾಡಿ ಪೌರ ಕಾರ್ಮಿಕರ ಕೊರತೆಗಳನ್ನು ತಿಳಿಸಿ, ಅತಿ ಶೀಘ್ರದಲ್ಲಿ ಮಾಸ್ಕ್ ಹಾಗೂ ಗ್ಲೌಸ್‌ಗಳನ್ನು ಪೂರೈಸಲು ತಿಳಿಸದರು.

**<u>3) ಬೀದಿ ಬದಿ ವ್ಯಾಪಾರಿಗಳ ತೆರವುಗೊಳಿಸುವ ಬಗ್ಗೆ:-</u>**

ಯಶವಂತಪುರ 1ನೇ ಮುಖ್ಯರಸ್ತೆ ಹಾಗೂ ಬಜಾರ್ ಸ್ಟ್ರೀಟ್ ರೋಡಲ್ಲಿ ಬೀದಿ ಬದಿ ವ್ಯಾಪಾರಿಗಳು ರಸ್ತೆ ಬದಿಯಲ್ಲಿ ತಮ್ಮ ತಳ್ಳುವ ಗಾಡಿಗಳನ್ನು ಇಟ್ಟು ವ್ಯಾಪಾರವನ್ನು ಮಾಡುತ್ತಿರುವುದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದ್ದು. ಕೂಡಲೇ ವ್ಯಾಪಾರಿಗಳನ್ನು ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಮೇಲ್ವಿಚಾರಕರು ಹಾಗೂ ಗ್ಯಾಂಗ್‌ಮ್ಯಾನ್‌ಗಳಿಗೆ ತಿಳಿಸಿದರು.

**<u>4) ಕಂದಾಯ ಇಲಾಖೆ:</u>**

ಸಭೆಗೆ ಹಾಜರಿದ್ದ ಮೌಲ್ಯ ಮಾಪಕರು ಹಾಗೂ ಕಂದಾಯ ವಸೂಲಿಗಾರರು ಮಾತನಾಡಿ. ವಾರ್ಡ್‌ನಲ್ಲಿ ಒಟ್ಟು 1.30 ಕೋಟಿ ಮೊತ್ತದ ಕಂದಾಯವು ಬಾಕಿ ಇರುವುದಾಗಿ ಸಭೆಗೆ ತಿಳಿಸಿದರು.

**<u>5) ಬಿಡಬ್ಲ್ಯೂಎಸ್‌ಎಸ್‌ಬಿ :</u>**

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಮಾಡೆಲ್ ಕಾಲೋನಿ 2ನೇ ಅಡ್ಡರಸ್ತೆಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿಯ ಖಾಲಿ ಜಾಗದಲ್ಲಿ ಯಥೇಚ್ಛವಾಗಿ ಗಿಡಗಳು ಬೆಳೆದಿರುವುದರಿಂದ ಹಾವು, ಚೇಳು, ಇಲಿ, ಹೆಗ್ಗಣಗಳು ಹೆಚ್ಚಾಗಿದ್ದು, ಅವುಗಳು ಅಕ್ಕಪಕ್ಕದಲ್ಲಿರುವ ಮನೆಗಳು ಹಾಗೂ ವಾರ್ಡ್ ಕಛೇರಿಗಳಿಗೆ ನುಗ್ಗುತ್ತಿರುವುದು ಕಂಡುಬಂದು ಸಾರ್ವಜನಿಕರು ದೂರನ್ನು ನೀಡಿರುತ್ತಾರೆ. ಅದರಂತೆ, ಸಭೆಗೆ ಹಾಜರಿದ್ದ ಬಿಡಬ್ಲ್ಯೂಎಸ್‌ಎಸ್‌ಬಿ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು. ಸಹಾಯಕ ಅಭಿಯಂತರರಾದ ಚನ್ನೇಶಪ್ಪ ರವರು ಮೇಲಾಧಿಕಾರಿಗಳಾದ ಗಂಗ ಲಕ್ಷ್ಮಮ್ಮ, ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಲು ಸೂಚಿಸಿದರು. ಅದರಂತೆ, ಮಾನ್ಯ ನೋಡಲ್ ಅಧಿಕಾರಿಗಳು ಗಂಗ ಲಕ್ಷ್ಮಮ್ಮ, ಸಹಾಯಕ ಕಾರ್ಯಪಾಲಕ ಅಭಿಯಂತರವರೊಡನೆ ದೂರವಾಣಿ ಮೂಲಕ ಮಾತನಾಡಿ ಕೂಡಲೇ ಕ್ರಮವಹಿಸಲು ಸೂಚಿಸಿದ್ದರು.

**<u>6) ಬೆಸ್ಕಾಂ :</u>**

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಸಮುದಾಯ ಭವನ, ಕೋವಿಡ್ ಆಸ್ಪತ್ರೆ, ಜಿಮ್ ಕಟ್ಟಡ, ವಾಡ್ ಕಛೇರಿಗಳ ಬಿಲ್ಲುಗಳನ್ನು ಪಾವತಿಸಲು ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಸಹಾಯಕ ಅಭಿಯಂತರರಾದ ಅನಿಲ್ ಕುಮಾರ್ ರವರು ತಿಳಿಸಿದರು. ಅದರಂತೆ, ನೋಡಲ್ ಅಧಿಕಾರಿಗಳು ಮಾತನಾಡಿ, ಸಂಬಂಧಪಟ್ಟ ಅದಿಕಾರಿಗಳಿಗೆ ಕೂಡಲೇ ಬಿಲ್ಲುಗಳನ್ನು ಪಾವತಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:37

(ಎನ್. ಜಿ. ಉಮೇಶ್)
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಾರ್ಡ್ ಸಮಿತಿ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ